# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref No.**: 09/2022

ಡಬ್ಲೂ. ಡಬ್ಲ್ಯೂ-2

**<u>ದಿನಾಂಕ 16.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಎ.ಸಿ.ಎನ್. ವಕೀಲರಿಂದಃ**

ಕೊವೀಡ ಸಮಯದಲ್ಲಿ ಕೆಲಸದಲ್ಲಿದ್ದ ಕಾರ್ಮಿಕರನ್ನು ಕೆಲಸದಿಂದ ತೆಗೆದರೆ ಒಂದು ವರ್ಷದ ಸಂಬಳ ಕೊಡಬೇಕು ಎಂದು ಸರ್ಕಾರದ ನಡಾವಳಿ ಇದ್ದು, ಅದರೆ ಅದನ್ನು ಇ.ಎಸ್.ಐ. ರವರು ಕೊಡಬೇಕು ಅದನ್ನು ಅವರು ಕೊಟ್ಟಿರುತ್ತಾರೆ, ನಾನು ಅದನ್ನು ತೆಗೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಉತ್ಪಾದಿಸಿದ ವಸ್ತುಗಳನ್ನು ರಪ್ತು ಮಾಡುವ ಅಧಿಕಾರ ಆಡಳಿತ ವರ್ಗಕ್ಕೆ ಇರುತ್ತದೆಯೇ ಹೊರತು ನನಗಲ್ಲ ಎಂದರೆ ಸರಿ. ದೇಶದ ಒಳಗೆ ಮಾರಾಟ ಮಾಡುವ ಅಧಿಕಾರವನ್ನು ಸರ್ಕಾರ ಆಡಳಿತ ವರ್ಗಕ್ಕೆ ಕೊಟ್ಟಿರಲಿಲ್ಲ ಎಂದರೆ ಸರಿ.

ಯಾವ ದಿನಾಂಕದಿಂದ ಕೆಲಸದಿಂದ ನಿರಾಕರಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ದಿನಾಂಕ 19.08.2020 ರಿಂದ ನಮ್ಮ ಕೆಲಸ ನಿರಾಕರಣೆ ಮಾಡಿರುತ್ತಾರೆ ಎಂದರೆ ಸರಿ. ಲೇಆಫ ಮಾಡಿದವರ ಪೈಕಿ 75 ಜನ ಕಾರ್ಮಿಕರು ಒಪ್ಪಂದದ ಪ್ರಕಾರ ಕೆಲಸಕ್ಕೆ ಸೇರಿಸಿಕೊಂಡರು ಎಂದರೆ ಸರಿ. ಅದರಲ್ಲಿ ಉಳಿದವರು 42 ಜನ ಎಂದರೆ ಸರಿ. ನಾನು 42 ಜನ ಕಾರ್ಮಿಕರ ಜೇಷ್ಠತಾ ಪಟ್ಟಿಯನ್ನು ನೋಡಿರುತ್ತೀರಾ ಎಂದರೆ ನೋಡಿರುತ್ತೇನೆ ಆದರೆ ಅದು ತಪ್ಪಾಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಜೇಷ್ಠತಾ ಪಟ್ಟಿ ತಪ್ಪಾಗಿರುತ್ತದೆ ಎನ್ನುವುದರ ಬಗ್ಗೆ ನಾವು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ರಿಂಟ್ರೆಂಚ್ ಮಾಡಿದವರ ಪೈಕಿ ಕೆಲವರನ್ನು ಅಂದರೆ 7 ಜನರನ್ನು ಕೆಲಸಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಜೇಷ್ಠತಾ ಪಟ್ಟಿಯನ್ನು ವಿಭಾಗಾವಾರು ಮಾಡಿದ್ದರು ಎಂದರೆ ಸರಿ. ಸದರಿ 7 ಜನರು ಜೇಷ್ಠತಾ ಪಟ್ಟಿಯ ಆಧಾರದ ಮೇರೆಗೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ವಿಭಾಗಾವಾರು ವಿಭಜನೆಯ ಪ್ರಕಾರ ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಇದೇ 42 ಜನ ಕಾರ್ಮಿಕರ ರಿಟ್ರೆಂಚ್ ಮೆಂಟ್ ಪ್ರಕರಣ ಔದ್ಯಮಿಕ

ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದರೆ ಸರಿ. ಆಡಳಿತ ವರ್ಗ ತೆಗೆದುಕೊಂಡಿರುವ ಕ್ರಮವು ಕಾನೂನುಬದ್ಧವಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.) (ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**